ಕ್ರ.ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	
		''	44. ನೀರ್ಥಡಿ
		''	45. ಮಳ್ಳಿಕಟ್ಟೆ
		''	46. ಗೊಲ್ಲರಹಳ್ಳಿ
		''	47. ಹೆಮ್ಮನಬೀತೂರು
		ಹೊಸದುರ್ಗ	48. ಸಾಣೆಹಳ್ಳಿ
		''	49. ಮಲ್ಲಪ್ಪನಹಳ್ಳಿ
		ಹಿರಿಯೂರು	50. ಎಂ. ಡಿ. ಕೋಟೆ
		ಜಗಳೂರು	51. ಹಿರೇಮಲ್ಲನಹೊಳೆ

ವಿಷಯ:- ಸರ್ಕಾರದ ಶಾಲೆಗಳ ದುರಸ್ಥಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1665 (2057)

ಶ್ರೀ ಹೆಚ್. ಡಿ. ಬಸವರಾಜು (ವೀರಾಜಪೇಟೆ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ತಾಲ್ಲೂಕಿನಲ್ಲಿರುವ ಬಹಳಷ್ಟು : ಶಾಲೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅವುಗಳನ್ನು ದುರಸ್ಥಿಗೊಳಿಸಲು ನಿಗಧಿಪಡಿಸಿರುವ ಹಣವೆಷ್ಟು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) ಹೌದು.

ಆ) ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ರೂ. 10 ಲಕ್ಷ ಹಣವನ್ನು 1995-96ನೇ ಸಾಲಿಗೆ ಕೊಡಗು ಜಿಲ್ಲೆಗೆ ಬಿಡುಗಡೆಗೊಳಿಸಿದೆ. ಹಾಗೂ ಪ್ರೌಢಶಾಲೆಗಳಿಗೆ ರೂ. 1.49 ಲಕ್ಷ ಹಣವನ್ನು ಈ ಜಿಲ್ಲೆಗೆ ಮುಂದುವರಿದ ಕಾರ್ಯಕ್ರಮದಡಿ ನಿಗದಿಗೊಳಿಸಿದೆ.

ವಿಷಯ:- ಸಹಕಾರಿ ಮಹಿಳಾ ಶಿಕ್ಷಕಿಯರ ತರಬೇತಿ ಸಂಸ್ಥೆ ಬಲ್ಮಠ ಮಂಗಳೂರು ಇಲ್ಲಿ ಶಿಕ್ಷಕರ ಕೊರತೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1666 (2027)

ಶ್ರೀ ಕುಂಬಳೆ ಸುಂದರ್ ರಾವ್ (ಸುರತ್ಕಲ್):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಮಹಿಳಾ ಶಿಕ್ಷಕಿಯರ ತರಬೇತಿ ಸಂಸ್ಥೆ ಬಲ್ಮಠ ಮಂಗಳೂರು ಇಲ್ಲಿ ಶಿಕ್ಷಕರ ಕೊರತೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ಬಗ್ಗೆ ಪ್ರಸ್ತುತ ಕೈಗೊಳ್ಳಲಾಗಿರುವ ಕ್ರಮಗಳೇನು.

ಇ) ಸದರಿ ಸಂಸ್ಥೆಯಲ್ಲಿ ಮಹಿಳಾ ಶಿಕ್ಷಕಿಯರ ಕೊರತೆ ಇದ್ದರೂ 1995-96 ನೇ ಸಾಲಿನಲ್ಲಿ ಈ ಸಂಸ್ಥೆಗೆ ವರ್ಗಾಯಿಸಲ್ಪಟ್ಟ ಮಹಿಳಾ ಶಿಕ್ಷಕಿಯೋರ್ವರನ್ನು ಇದೇ ಆವರಣದಲ್ಲಿರುವ ಶಿಕ್ಷಕರ ಕೊರತೆ ಇಲ್ಲದ ಸರ್ಕಾರಿ ಬಾಲಕಿಯರ ಕಿರಿಯ ಕಾಲೇಜು ಬಲ್ಮಠ ಇಲ್ಲಿಗೆ ಮರಳಿ ವರ್ಗಾವಣೆ

ಮಾಡಲು ಕಾರಣವೇನು?

ಈ) ಮಹಿಳಾ ಶಿಕ್ಷಕಿಯರ ಕೊರತೆಯನ್ನು 1995-96 ರ ಶೈಕ್ಷಣಿಕ ವರ್ಷದಲ್ಲಿ ಸರ್ಕಾರ ಭರ್ತಿ ಮಾಡುವುದೇ

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) ಈ ಕೊರತೆಯನ್ನು ನೀಗಿಸಲು 1995-96 ನೇ ಸಾಲಿನ ವರ್ಗಾವಣೆ ವೇಳೆಯಲ್ಲಿ ಇಬ್ಬರು ಶಿಕ್ಷಕರನ್ನು ಈ ಶಾಲೆಗೆ ವರ್ಗಾವಣೆ ಮಾಡಲಾಗಿತ್ತು. ಇದರಲ್ಲಿ ಒಬ್ಬ ಶಿಕ್ಷಕರು ಈ ಸಂಸ್ಥೆಗೆ ಕೆಲಸಕ್ಕೆ ಹಾಜರಾಗಿರುತ್ತಾರೆ.

ಇ) ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾಯಿಸಲಾಗಿದೆ.

ಈ) 1995-96ನೇ ಶೈಕ್ಷಣಿಕ ವರ್ಷದಲ್ಲಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ:- ದ.ಕನ್ನಡ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖಾ ಉಪನಿರ್ದೇಶಕರ ಕಛೇರಿಯ ಕಟ್ಟಡ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1667 (2024)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖಾ ಉಪನಿರ್ದೇಶಕರ ಕಛೇರಿಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ;

ಆ) ಈಗ ಕಛೇರಿ ನಡೆಸುತ್ತಿರುವ ಕಟ್ಟಡಕ್ಕೆ ಮಾಸಿಕ ನೀಡುತ್ತಿರುವ ಬಾಡಿಗೆ ಎಷ್ಟು ಮತ್ತು ಎಂದಿನಿಂದ ನೀಡಲಾಗುತ್ತಿದೆ.

ಇ) ಸದರಿ ಇಲಾಖೆಗೆ ಇಷ್ಟರವರೆಗೆ ಸ್ವಂತ ಕಟ್ಟಡ ರಚಿಸಲು ಕ್ರಮ ಕೈಗೊಳ್ಳದಿರಲು ಕಾರಣವೇನು,

ಈ) ಸದರಿ ಕಛೇರಿಗೆ ಸ್ವಂತ ಕಟ್ಟಡ ರಚಿಸುವ ಪ್ರಸ್ತಾವನೆ ಸರಕಾರದ ಮುಂದೆ ಇದೆಯೇ, ಹಾಗಿದ್ದಲ್ಲಿ ಯಾವ ಸ್ಥಳದಲ್ಲಿ ಕಟ್ಟಲಾಗುತ್ತದೆ (ಜಾಗದ ಸರ್ವೆ ನಂಬರು ಒದಗಿಸುವುದು)

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) 1. ದಿನಾಂಕ 1.3.87ರಿಂದ 31.5.90 ರ ವರೆಗೆ ರೂ. 17160-00 ಪ್ರತಿ ಮಾಹೆ

2. ದಿನಾಂಕ 1.8.90 ರಿಂದ 28.2.92 ರ ವರೆಗೆ ರೂ. 22624-00 ಪ್ರತಿ ಮಾಹೆಗೆ

3. ದಿನಾಂಕ 1.3.92 ರಿಂದ ಈ ವರೆಗೆ ರೂ. 14955-00.

ಇ) 1995-96ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಕ್ರಿಯಾ ಯೋಜನೆ ದಕ್ಷಿಣ ಕನ್ನಡ ಸಾರ್ವಜನಿಕ ಶಿಕ್ಷಣ ಇಲಾಖಾ ಉಪನಿರ್ದೇಶಕರ ಕಚೇರಿ ಮತ್ತು ಸಹಾಯಕ ವಿದ್ಯಾಧಿಕಾರಿಗಳ ಕಚೇರಿ ಬಂಟ್ವಾಳ ಇಲ್ಲಿಗೆ ಸ್ವಂತ ಕಛೇರಿ ಹೊಂದುವ ಬಗ್ಗೆ ರೂ. 18 ಲಕ್ಷಗಳ